Sri H. N. NANJE GOWDA (Minister of State for Major Irrigation).—

(*a*) No. It is correctly gauged.

(*b*) Yes.

(*c*) Yes.

(*d*) Yes.

(*e*) No.

CALCULATION OF WATER RELEASED TO ANDHRA

60. Sri B. SATHYANARAYANA SINGH (Hospet).—

Will the Minister of State for Major Irrigation be pleased to state :—

(*a*) whether it is a fact that the water given to Andhra is not being actually gauged but is calculated on quantum basis ;

(*b*) if so, the steps taken by Government to press the T.B. Board to actually gauge the water that is being supplied to Andhra ;

(*c*) whether it is a fact that working tables prepared by Central Water and Power Commission are implemented only during December to June period ;

(*d*) if so, the basis on which the total quota of water supplied to Andhra throughout the year is arrived at ?

Sri H. N. NANJE GOWDA (Minister of State for Major Irrigation).—

(*a*) No. It is properly gauged.

(*b*) In view of reply to clause (*a*) above does not arise.

(*c*) No.

(*d*) On the basis of water let down from the spillway and sluices.

ತಾವು ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಮುಂಚೆ ಒಂದು ತಿದ್ದುಪಡಿ ಮಾಡಬೇಕಾಗಿದೆ. (ಇ) ಯಲ್ಲಿ ಕಾರ್ಯದರ್ಶಿಯವರು ಗೈರುಹಾಜರು ಆಗಿದ್ದುದು ನಿಜವೇ ಎಂದು ಕೇಳಿದ್ದಾರೆ. ಆಗ ಅವರು ರಜಾದ ಮೇಲೆ ಇದ್ದರು.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಆಂಧ್ರ ರಾಜ್ಯಕ್ಕೆ 3 ಟಿ.ಎಂ.ಸಿ.ಎಫ್. ಟಿನೀರು ಕೊಡುವುದಕ್ಕೆ ಒಪ್ಪಿದ್ದೀರಿ. ಆದರೆ ಅದು ಕಾರ್ಯಗತವಾಗುವಾಗ 5 ಟಿ.ಎಂ.ಸಿ.ಎಫ್.ಟಿ ನೀರು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಡೆಲ್ಲಿಯಲ್ಲಿ ಹೋದ ಸಲ ನಡೆದ ತಜ್ಞರ ಸಭೆಯಲ್ಲಿಯೂ ಇದನ್ನು ಚರ್ಚೆ ಮಾಡಿದ್ದಾರೆ. ಇವರ ಬಗ್ಗೆ ಟಿ ಬಿ. ಬೋರ್ಡಿನೊಡನೆ ವ್ಯವಹಾರ ನಡೆಸಿ ಎಷ್ಟು ನೀರು ಖಚಿತವಾಗಿ ತೆಗೆದುಕೊಂಡಿದ್ದಾರೆಂಬುದನ್ನು ನಿರ್ಣಯ ಮಾಡಿದ್ದೀರಾ ? ಮತ್ತು ಅವರಿಗೆ ಹೀಗೆ ನೀರು ಕೊಟ್ಟಿದುದರಿಂದ ತುಂಗಭದ್ರಾದ ಪ್ರದೇಶದಲ್ಲರುವೆ ರೈತರಿಗೆ ನೀರು ಸಾಕಷ್ಟು ಸಿಗದೆ ಬಹಳ ತೊಂದರೆ ಪಡುತ್ತಿದ್ದಾರೆ .....ಇದನ್ನು ಹೋಗಲಾಡಿಸಲು ತಾವು ಅವರಿಂದ ನೀರನ್ನು ವಾಪಸ್ಸು ಹಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—(ಎ) ಇಲ್ಲ. ಸರಿಯಾಗಿ ಗೇಜ್ ಮಾಡಲಾಗಿದೆ.

(ಬಿ) ಹೌದು.

(ಸಿ) ಹೌದು.

(ಡಿ) ಹೌದು.

(ಇ) ಇಲ್ಲ.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರು ಆಂಧ್ರಕ್ಕೆ ಬಿಟ್ಟಂತಹ ನೀರಿನ ಬಗ್ಗೆ ಕೇಳಿದ್ದಾರೆ. ನಮ್ಮ ರಾಜ್ಯದಿಂದ ಬಿಡುಗಡೆ ಮಾಡಲಾದ ನೀರನ್ನು ರಾಜೋಲಬಂಡೆ ಅಣೆಕಟ್ಟಿನ ಹತ್ತಿರ ಅಳತೆ ಮಾಡತಕ್ಕಂತಹ ಅವಕಾಶವನ್ನು ಮಾಡಿಕೊಂಡಿದ್ದೇವೆ. ಇದರ ಪ್ರಕಾರ 9ನೇ ತಾರೀಖಿನ ವರೆಗೆ 5399 ಕ್ಯೂಸೆಕ್ಸ್ ನೀರು ಬಿಟ್ಟಿದ್ದಾರೆ. ಅಂದರೆ 2,100 ಹೆಚ್ಚಿಗೆ ಹರಿದಿದೆ. ಏಪ್ರಿಲ್ 10 ರಿಂದ 17ರ ವರೆಗೆ 6,610 ಕ್ಯೂಸೆಕ್ಸ್ ನೀರು ಹರಿದಿದೆ. ಅಂದರೆ ಮೂರು ಸಾವಿರ ಚಿಲ್ಲರೆ ಎಕ್ಟ್ರು ಹರಿದಿದೆ. 9 ದಿನ 3,300 ಕ್ಯೂಸೆಕ್ಸ್ ಓಡಬೇಕಾಗಿತ್ತು. ಆದ್ದರಿಂದ ಹೆಚ್ಚಿಗೆ ಏನೂ ಬಿಟ್ಟಿಲ್ಲ. ಇದು ನಮ್ಮ ಅಳತೆಯಿಂದ ಗೊತ್ತಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈಗ ಮಾನ್ಯ ಮಂತ್ರಿಗಳು ಆಂಧ್ರಕ್ಕೆ ನೀರು ಬಿಡುವುದರ ಬಗ್ಗೆ ಏನು ಗೇಜ್ ಮಾಡುತ್ತಿದ್ದೇವೆ ಎಂದು ಹೇಳಿದರು ಅದು ಸುಳ್ಳು. ಆವರು ಆ ರೀತಿ ಗೇಜ್ ಮಾಡುತ್ತಿಲ್ಲ. ಸ್ಪಿರ್‌ವೇ ಮೇಲೆ ನೀರನ್ನು ಬಿಡುತ್ತಿದ್ದಾರೆ. ಆದರೆ ಅದನ್ನು ಅಕ್ಯುಯಲ್ ಆಗಿ ಗೇಜ್ ಮಾಡುತ್ತಿಲ್ಲ. ಇದರಿಂದ ತೊಂದರೆಯಾಗಿದೆ. ಆದಕಾರಣ ಬೇರೆ ರೀತಿ ಗೇಜ್ ಮಾಡಿ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ರಾಜೋಲಬಂಡ್ ಹತ್ತಿರ ಇಷ್ಟು ಕ್ಯೂಸೆಕ್ಸ್ ಎಂದು ಗೇಜ್ ಮಾಡಿ ನೀರು ಬಿಡುತ್ತಿದ್ದಾರೆ ಎಂದು ನನಗೆ ವರದಿಯನ್ನು ಕಳುಹಿಸಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಬೇರೆ ರೀತಿಯಲ್ಲಿ ಖಾಯಂ ಆಗಿ ನೀರುಬಿಡುವುದನ್ನು ಗೇಜ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಏನು ಹೇಳಿದ್ದಾರೆ ಅದನ್ನು ಪರಿಶೀಲಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಮೊದಲು ತುಂಗಭದ್ರಾ ಅಣೆಕಟ್ಟಿನಿಂದ ಆಂಧ್ರಕ್ಕೆ ನೀರು ಬಿಡಬೇಕು ಎಂದು ನಮ್ಮ ಸರ್ಕಾರದವರನ್ನು ಕೇಳಿದಾಗ ತುಂಗಭದ್ರಾ ಅಣೆಕಟ್ಟಿನಲ್ಲಿ ಇಷ್ಟು ನೀರಿಲ್ಲ ಆದ್ದರಿಂದ ಆಂಧ್ರಕ್ಕೆ ನೀರನ್ನು ಬಿಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆ ಮೇಲೆ ನಮ್ಮ ರಾಜ್ಯದ ಮಂತ್ರಿಮಂಡಲದವರನ್ನು ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಡಾ। ಕೆ. ಎಲ್. ರಾವ್ ಆವರು ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸಿದ ಮೇಲೆ ಈ ಮಂತ್ರಿ ಮಂಡಲದವರು ಆಂಧ್ರಕ್ಕೆ ನೀರು ಕೊಡುತ್ತೇವೆ ಎಂದು ತೀರ್ಮಾನ ತೆಗೆದುಕೊಂಡು ಆಂಧ್ರಕ್ಕೆ ನೀರನ್ನು ಬಿಟ್ಟರು.. ಇದರಿಂದ ನಮ್ಮ ರಾಜ್ಯದ ಫಸಲಿಗೆ ತೊಂದರೆಯಾಗಿ ಅದು ಒಣಗಿ ಹೋಗಿಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಈ ಬಗ್ಗೆ ಈ ಸಭೆಯಲ್ಲಿ ನಾನು ಅನೇಕ ಸಾರಿ ಉತ್ತರವನ್ನು ಹೇಳಿದ್ದೇನೆ. ನಾವು ಆಂಧ್ರಕ್ಕೆ ನೀರು ಬಿಡುವುದನ್ನು ತಡೆಗಟ್ಟಬೇಕು ಎಂದು ಯೋಚನೆ ಮಾಡುತ್ತಿರುವಾಗ ನಮ್ಮ ನಿರೀಕ್ಷೆಗಿಂತ ಮೊದಲೇ ಯಥೇಚ್ಛವಾಗಿ ಮಳೆ ನೀರು ಬಂದದ್ದರಿಂದ ಅಣೆಕಟ್ಟಿಗೆ ಹೆಚ್ಚು ನೀರು ಬಂತು. ಆದ್ದರಿಂದ ಬೆಳೆ ಒಣಗಿದೆ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈಗ ಮಾನ್ಯ ಮಂತ್ರಿಗಳು ತುಂಗಭದ್ರಾ ಮಂಡಲಯ ಕಾರ್ಯದರ್ಶಿಯವರು ರಜಾ ಹೋಗಿದ್ದರು ಎಂದು ತಿಳಿಸಿದರು. ಅವರು ರಜಾ ಹೋಗಿದ್ದಾಗ ಅವರ ಜಾಗದಲ್ಲಿ ಆಂಧ್ರದ ಪ್ರತಿನಿಧಿಯಾದ ಸೂಪರಿನ್‌ಟೆಂಡೆಂಟ್ ಇಂಜಿನಿಯರು ಕೆಲಸವನ್ನು ನಿರ್ವಹಿಸುತ್ತಿದ್ದರು ಆ ಸಂದರ್ಭದಲ್ಲಿ ಅವರು ಆಂಧ್ರಪ್ರದೇಶಕ್ಕೆ 3 ಸಾವಿರ ಟಿ.ಎಂ.ಸಿ.ಎಫ್.ಟಿ. ನೀರಿಗಿಂತ ಜಾಸ್ತಿ ಬಿಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಈಗಾಗಲೇ ಕೇಳಿದ್ದೇನೆ ಏಪ್ರಿಲ್ 1ನೇ ತಾರೀಖಿನಿಂದ ಏಪ್ರಿಲ್ 9ನೇ ತಾರೀಖಿನವರೆಗೆ 3299 ಕ್ಯೂಸೆಕ್ಸ್‌ನಂತೆ ನೀರು ಬಿಟ್ಟಿದೆ ಎಂದು. ಇದನ್ನು ರಾಜೋಲಬಂಡ್ ಹತ್ತಿರ ಅಳತೆ ಮಾಡಲಾಗುತ್ತಿತ್ತು. ಅಡೀಪಷನಲ್ ನೀರು ಕೊಟ್ಟನಂತರ ಅಲ್ಲಿ 9ನೇ ತಾರೀಖು 5399 ಕ್ಯೂಸೆಕ್ಸ್ ನೀರು, 10ನೇ ತಾರೀಖಿನಿಂದ 17ನೇ ತಾರೀಖಿನವರೆಗೆ 6610 ಕ್ಯೂಸೆಕ್ಸ್ ನೀರು, 17—18ನೇ ತಾರೀಖು 3299 ಕ್ಯೂಸೆಕ್ಸ್ ನೀರು ಹರಿಯುತ್ತಿತ್ತು, ಏಪ್ರಿಲ್ 1ನೇ ತಾರೀಖಿನಿಂದ 9ನೇ ತಾರೀಖಿನವರೆ 3 ಟಿ. ಎಂ. ಸಿ. ಎಫ್. ಟಿ. ನೀರನ್ನು ಮಾತ್ರ ಆಂಧ್ರಕ್ಕೆ ಬಿಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಹೆಚ್ಚಿಗೆ ನೀರನ್ನು ಬಿಟ್ಟಿದ್ದಾರೆ ಎಂದು ಹೇಳತಕ್ಕಂಥಾ ಮಾತು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಂಧ್ರಾ ಗಡಿಯವರಗೆ ನೀರು ಹೋಗುವವರೆಗೆ ಎಷ್ಟು ನೀರು (ಟ್ರಾನ್ಸ್‌ಮಿಷನ್) ವೇಸ್ಟಾಗುತ್ತದೆ ? ಅದು ಮೈಸೂರಿನವರ ಲೆಕ್ಕಕ್ಕೆ ಸೇರುತ್ತದೆಯೋ ಅಥವಾ ಆಂಧ್ರದವರ ಲೆಕ್ಕಕ್ಕೆ ಹೋಗುತ್ತದೆಯೋ ?

ಶ್ರೀ ಎಚ್. ಎನ್. ನಂಜೇಗೌಡ.—ಅದು ಭಾರಿ ನೆಗ್ಲಿಜಬಲ್. ಅದು ಒಂದು ಪರ್ಸೆಂಟ್ ಅಥವಾ 2 ಪರ್ಸೆಂಟ್ ಆಗಬಹುದು. ಅದನ್ನು ಲೆಕ್ಕಹಾಕಿಸಿ ನೋಡಿದ್ದೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈಗ ತಾವು ಹಿಂದೆ ತುಂಗಭದ್ರಾ ಅಣೆಕಟ್ಟಿನಿಂದ ಆಂಧ್ರಾ ಪ್ರದೇಶಕ್ಕೆ 3 ಟಿ. ಎಂ. ಸಿ. ಎಫ್. ಟಿ. ನೀರನ್ನು ಕೊಟ್ಟಿದ್ದೀರಿ. ಈಗ ನಮ್ಮ ತುಂಗಭದ್ರಾ ಅಣೆಕಟ್ಟಿನ ಕೆಳಗಡೆ ನೀರಿಗೆ ತೊಂದರೆಯಾಗಿದೆ. ಆದ್ದರಿಂದ ಅವರಿಂದ ಒತ್ತಾಯಮಾಡಿ ನಮ್ಮ ರೈತರಿಗೆ ಹೆಚ್ಚಿನ ನೀರನ್ನು ಕೊಡಿಸುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ತುಂಗಭದ್ರಾ ಅಣೆಕಟ್ಟಿನ ಕೆಳಗಡೆ ನಮ್ಮ ರೈತರಿಗೆ ನೀರಿನ ತೊಂದರೆಯಾಗಿದೆಯೇ ಹೇಗೆ ಎಂಬುದನ್ನು ಪರಿಶೀಲಿಸಿ ಸಂಬಂಧ ಪಟ್ಟವರೊಡನೆ ಮಾತನಾಡುವ ಅವಶ್ಯಕತೆ ಇದ್ದರೆ ಮಾತನಾಡುತ್ತೇವೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತುಂಗಭದ್ರಾದಿಂದ ಆಂಧ್ರಕ್ಕೆ ನೀರು ಬಿಡುವ ಬಗ್ಗೆ ವರ್ಕಿಂಗ್ ಟೇಬಲ್ ಸರಿಯಾಗಿಲ್ಲದೆ ಇರುವುದರಿಂದ ಜೂನ್ ತಿಂಗಳು ಮತ್ತು ಮೇ ತಿಂಗಳು ಸರಿಯಾಗಿ ಮಳೆ ಆದಾಗ ರಿಜರ್ವಾಯರ್ ತುಂಬ ಹೆಚ್ಚಿನ ನೀರೆಲ್ಲಾ ನಮಗಿಲ್ಲದೆ ಹರಿದು ಹೋಗುತ್ತದೆ. ಆದ್ದರಿಂದ ಆಂಧ್ರದವರಿಗೆ ಉಪಯೋಗವಾಗುತ್ತದೆ. ಅದನ್ನು ಕರೆಕ್ಟ್ ಮಾಡುವುದಕ್ಕೆ ಯಾವುದಾದರೂ ಆಧಾರ ಇದೆಯೇ ಹೇಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—1965 ನೇ ಇಸವಿಯಲ್ಲಿ ಸಿ.ಪಿ.ಡಬ್ಲ್ಯು.ಪಿ.ಸಿ. ಯಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಒಪ್ಪಂದವಾಗಿ ಒಂದು ವರ್ಕಿಂಗ್ ಟೇಬಲ್ ತಯಾರಾಗಿತ್ತು. ಜೊತೆಗೆ ಡ್ಯಾಮ್ ಪೋರ್ಟನಲ್ಲಿ ನೀರು ನಿಲ್ಲುವ ಸ್ಥಳದಲ್ಲಿ ಸ್ವಲ್ಪಸಿರ್ಟ್ ಅಪ್ ಆಗಿರುವುದರಿಂದ ಅದು ಸ್ವಲ್ಪ ವ್ಯತ್ಯಾಸವಾಗಿರಬಹುದು ಎಂದು ಕಾಣುತ್ತದೆ. ಆದ್ದರಿಂದ ಹೊಸದಾಗಿ ವರ್ಕಿಂಗ್ ಟೇಬಲ್ ತಯಾರು ಮಾಡಬೇಕು ಎಂಬುದು ರಾಜ್ಯ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ವಿ. ಎನ್. ಪಾಟೀಲ್.—ತುಂಗಭದ್ರಾ ಅಣೆಕಟ್ಟಿನಿಂದ ಆಂಧ್ರಕ್ಕೆ ನೀರು ಬಿಟ್ಟಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಎಷ್ಟೋ ಸಾರಿ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರಿಯಾಗಿ ಅಂಕಿ ಅಂಶಗಳು ಹೊರಬರುತ್ತಿಲ್ಲ. ಹೀಗಿರುವಾಗ ಅಲ್ಲಿ ನಮ್ಮ ಅಧಿಕಾರಿಯೊಬ್ಬರನ್ನು ಏತಕ್ಕೆ ನೇಮಕ ಮಾಡಬಾರದು ?

ಶ್ರೀ ಎಚ್. ಎನ್. ನಂಜೇಗೌಡ.—ಈ ವಿಚಾರದಲ್ಲಿ ನಾನು ಒಂದೆರಡು ಸಾರಿ ಈ ಸಭೆಗೆ ತಿಳಿಸಿದ್ದೇನೆ. ಈ ವಿಷಯದಲ್ಲಿ ಆಂಧ್ರದ ಅಧಿಕಾರಿಗಳು ಸ್ವಲ್ಪ ಎಲ್ಲೆ ಮೀರಿ ವರ್ತಿಸಿದಂತಹ ಸಂದರ್ಭ ಹಿಂದೆ ಇತ್ತು. ಇತ್ತೀಚೆಗೆ ನಮ್ಮ ರಾಜ್ಯದ ದೊಡ್ಡ ಅಧಿಕಾರಿಗಳು ಚೀಫ್ ಇಂಜಿನಿಯರು ಒಬ್ಬರು ಅಲ್ಲಿ ಇದ್ದಾರೆ. ಆದ್ದರಿಂದ ಇತ್ತೀಚೆಗೆ ಅಂಥಾ ಮಿಸ್‌ಚೀಫ್ ಯಾವುದೂ ನಡೆದಿಲ್ಲ. ಕೆನಾಲ್‌ಮೇಲೆ ಗೇಜ್ ಮಾಡತಕ್ಕಂಥಾ ವ್ಯವಸ್ಥೆ ಇದೆ. ನೀರು ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಿಡುತ್ತಾರೆ. ನಾರಾ ಕೆಳಗಡೆ, ಮತ್ತು ಹೊಳೆಯಲ್ಲಿ ನೀರನ್ನು ಅಳೆಯ ಬಹುದು ನೀರನ್ನು ಗೇಜ್ ಮಾಡುವುದಕ್ಕೆ ಅನೇಕ ಕಡೆ ಅವಕಾಶ ಇದೆ. ಅವರು ಏನಾದರೂ ಮಿಸ್‌ಚೀಫ್ ಮಾಡಿದರೆ ನಮಗೆ ತಕ್ಷಣ ಗೊತ್ತಾಗುತ್ತದೆ. ಆದರೆ ಈಗ ನಮ್ಮ ಚೀಫ್ ಇಂಜಿನಿಯರ್ ಅವರು ಸಧ್ಯಕ್ಕೆ ದೊಡ್ಡ ಅಧಿಕಾರಿಯಾಗಿರುವುದರಿಂದ ಅವರ ಮಾತನ್ನು ಕೇಳಿದಿದ್ದರೆ ಪರಿಸ್ಥಿತಿ ಹತೋಟಿ ಮೀರಿ ಹೋಗುತ್ತದೆ ಎಂಬುದು ಅವರಿಗೂ ಗೊತ್ತು. ಈಗ ಅಲ್ಲಿಯ ಪರಿಸ್ಥಿತಿ ಹದ್ದುಬಸ್ತಿನಲ್ಲಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ನಮ್ಮ ರಾಜ್ಯದ ಚೀಫ್ ಇಂಜಿನಿಯರ್ ಒಬ್ಬರನ್ನು ಅಲ್ಲಿಗೆ ಹಾಕಿ ಎಂದರೆ ಸರ್ಕಾರದವರು ಸಾಕಷ್ಟು ಕೆಲಸವಿಲ್ಲ ಎಂದು ಹೇಳುತ್ತಾರೆ. ನೆನ್ನೆತನ್ನೆ ಮೈನರ್ ಇರಿಗೇಷನ್ ಇಲಾಖೆಗೆ ಎರಡು ಚೀಫ್ ಇಂಜಿನಿಯರ್ ಗ್ರೇಡಿನ ಹುದ್ದೆಗಳನ್ನು ಕ್ರಿಯೇಟ್ ಮಾಡಿದ್ದಾರೆ. ಎರಡು ಪೋಸ್ಟ್‌ಗಳ ಪೈಕಿ ಒಬ್ಬರನ್ನು ಆ ಭಾಗಕ್ಕೆ ನೇಮಕ ಮಾಡಿ ಅಲ್ಲಿಯ ಕೆಲಸ ಒಳ್ಳೆಯ ರೀತಿಯಲ್ಲಿ ಕಾರ್ಯಗತವಾಗುವಂತೆ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

SRI H. N. NANJE GOWDA.—It will be considered.